# ಹಿಮಾ: ಟೋಕಿಯೊ ಮೇಲೆ ಕಣ್ಣು

ಟೋಕಿಯೊ ಒಲಿಂಪಿಕ್ಸ್ 2021ರಲ್ಲಿ ನಡೆಯಬಹುದು ಎನ್ನುವುದು ಎಲ್ಲರ ನಿರೀಕ್ಷೆ. ಈ ಮಧ್ಯೆ ಭಾರತದಿಂದ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಲು ಹಿಮಾ ದಾಸ್ ಅರ್ಹತೆ ಪಡೆಯಬಹುದೆ ಎನ್ನುವುದು ಆಕೆಯ ಅಭಿಮಾನಿಗಳ ಚಿಂತೆ.

ಭಾರತ ಇತ್ತೀಚೆಗೆ ಕಂಡ ಅತ್ಯುತ್ತಮ ಸ್ಪ್ರಿಂಟರ್ ಈ ಹಿಮಾ ದಾಸ್. ಇನ್ನೂ 20ರ ಹರೆಯದ ಈಕೆ, ಎರಡು ವರ್ಷಗಳ ಹಿಂದೆ ತನ್ನ ಸಾಧನೆಯಿಂದ ಸೆನ್ಸೇಷನ್ ಸೃಷ್ಟಿಸಿದ್ದು ಸುಳ್ಳಲ್ಲ. 400 ಮೀಟರ್ ಓಟದಲ್ಲಿ ಈಗಿನ ರಾಷ್ಟ್ರೀಯ ದಾಖಲೆ (50.79 ಸೆಕೆಂಡ್) ಈಕೆಯ ಹೆಸರಲ್ಲಿದೆ. 2018ರ ಜಕಾರ್ತಾದ ಏಷ್ಯನ್ ಗೇಮ್ಸ್‌ನಲ್ಲಿ ಬೆಳ್ಳಿ ಪದಕ ಗೆಲ್ಲುವ ಮೂಲಕ ಈಕೆ ಈ ಟೈಮಿಂಗ್ ದಾಖಲಿಸಿದ್ದಾರೆ. ಅದೇ ಕೂಟದಲ್ಲಿ ಮಹಿಳೆಯರ 400 ಮೀ ರಿಲೇ ಮತ್ತು ಮಿಕ್ಸೆಡ್ 400 ಮೀ ರಿಲೇನಲ್ಲಿ ಚಿನ್ನ ಗೆದ್ದ ತಂಡದಲ್ಲೂ ಹಿಮಾ ಇದ್ದರು. ಅದಕ್ಕೂ ಮುನ್ನ ಫಿನ್ಲೆಂಡ್‌ನಲ್ಲಿ ನಡೆದ ಐಎಎಎಫ್ ಚಾಂಪಿಯನ್‌ಷಿಪ್‌ನಲ್ಲಿ ಇಪ್ಪತ್ತರ ಕೆಳಗಿನ ವಯೋಮಾನದವರ 400 ಮೀಟರ್ ಓಟದಲ್ಲಿ ಚಿನ್ನ ಗೆದ್ದು ಈಕೆ ಭಾರತದ ಕಣ್ಮಣಿಯಾಗಿದ್ದಳು. ಕಣ್ಮಣಿ ಏಕೆಂದರೆ, 20ರ ಕೆಳಗಿನ ವಯೋಮಾನದ ಅಂತರರಾಷ್ಟ್ರೀಯ ಟ್ರಾಕ್ ಇವೆಂಟ್‌ನಲ್ಲಿ ಚಿನ್ನ ಗೆದ್ದ ಮೊದಲ ಭಾರತೀಯ ಅಥ್ಲೀಟ್ ಈಕೆ.

ಆದರೆ ಈಗಿನ ಸುದ್ದಿಯ ಪ್ರಕಾರ, ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಈಕೆ 400 ಮೀಟರ್ ಓಟದಲ್ಲಿ ಭಾಗವಹಿಸುವುದಿಲ್ಲ. ಬದಲಾಗಿ 200 ಮೀಟರ್ ಟ್ರ್ಯಾಕ್ ಓಟದಲ್ಲಿ ಅರ್ಹತೆಗೆ ಪ್ರಯತ್ನಿಸುತ್ತಾಳೆ. ಕಳೆದ ವರ್ಷ ದೋಹ ಕತಾರ್‌ನಲ್ಲಿ ನಡೆದ 400 ಮೀಟರ್ ಓಟಕ್ಕೆ ಈಕೆಗೆ ಅರ್ಹತೆ ದೊರೆಯಲಿಲ್ಲ. ಅದಕ್ಕೆ ಕಾರಣ ತೀವ್ರವಾದ ಬೆನ್ನುನೋವು ಮತ್ತು ಅದರ ಚಿಕಿತ್ಸೆ. ಆ ಟೂರ್ನಿಗೆ ಸಿದ್ಧತೆ ಮಾಡಬೇಕಾದ ಸಮಯದಲ್ಲಿ ಮೂರು ವಾರಗಳ ಕಾಲ ಜ್ವರದಿಂದ ಮಲಗಿದ್ದೂ ಕಾರಣವಾಯಿತು.

400 ಮೀಟರ್ ಓಟದಲ್ಲಿ ಅರ್ಹತೆಯ ಮಟ್ಟ ತಲುಪುವುದು ಈಗಿನ ಸ್ಥಿತಿಯಲ್ಲಿ ಕಷ್ಟ. ಅದರ ಬದಲು ಈಕೆಯನ್ನು 200 ಮೀಟರ್ ಓಟದಲ್ಲಿ ಕಣಕ್ಕಿಳಿಸಲು ಆಯ್ಕೆ ಸಮಿತಿಯವರು ನಿರ್ಧರಿಸಿದ್ದಾರೆ. 200 ಮೀಟರ್ ಓಟದಲ್ಲೂ ಈಕೆಗೆ ಅರ್ಹತೆ ಸಿಗುತ್ತದೆಯೋ ಎನ್ನುವುದನ್ನು ಕಾದು ನೋಡಬೇಕು. 2018ರಲ್ಲಿ 200 ಮೀಟರ್ ಓಟದಲ್ಲಿ ಈಕೆಯ ಅತ್ಯುತ್ತಮ ಟೈಮಿಂಗ್ 23.10 ಸೆಕೆಂಡ್. ಈ ವಿಭಾಗದಲ್ಲಿ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಬೇಕೆಂದರೆ 22.80 ಸೆಕೆಂಡ್‌ಗಳಲ್ಲಿ ದೂರ ಕ್ರಮಿಸಬೇಕು. ಇನ್ನಿರುವ ನಾಲ್ಕೂವರೆ ತಿಂಗಳ ಅವಧಿಯೊಳಗೆ ಈ ಟೈಮಿಂಗ್ ಸಾಧಿಸಿದರೆ, ಒಲಿಂಪಿಕ್ಸ್ ದಾರಿ ಸುಗಮ.

ಇತ್ತೀಚೆಗೆ ಈಕೆ ಸುದ್ದಿಯಾದದ್ದು ಅಡಿಡಾಸ್ ಬ್ರ್ಯಾಂಡ್‌ನ ರಾಯಭಾರಿ ಆದದ್ದರಿಂದ. ಅಸ್ಸಾಂನ ಧಿಂಗ್ ಎನ್ನುವ ಪುಟ್ಟ ಪಟ್ಟಣದ ಸಮೀಪದ ಹಳ್ಳಿಯ ರೈತ ಕುಟುಂಬದಿಂದ ಬಂದವಳೀಕೆ. ಈಗ ಧಿಂಗ್ ಎಕ್ಸ್‌ಪ್ರೆಸ್ ಎಂದೇ ಅಡ್ಡಹೆಸರು ಬಂದಿದೆ. ಮೊದಲ ಬಾರಿ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಓಡಿದಾಗ ಈಕೆ ಬರಿಗಾಲಲ್ಲಿ ಓಡಿದವಳು! ಏಕೆಂದರೆ ಈಕೆಯ ಬಳಿ ಅತ್ಯುತ್ತಮ ಗುಣಮಟ್ಟದ ಶೂಗಳು ಇರಲಿಲ್ಲ. 'ಅಪ್ಪ ಒಂದು ಜೊತೆ ಸ್ಪೈಕ್ ಇರುವ ಓಟದ ಶೂ ತಂದುಕೊಟ್ಟಿದ್ದರು. ಆದರೆ ಅದು ಸಾಧಾರಣ ಶೂ. ಆ ಶೂ ಮೇಲೆ ನಾನೇ ಕೈಯಲ್ಲಿ ಅಡಿಡಾಸ್ ಎಂದು ಬರೆದುಕೊಂಡೆ' ಎಂದು ಆಕೆ ಹೇಳಿದ್ದು ವರದಿಯಾಗಿದೆ.

ಆದರೆ ಸಾಧನೆ ಈಕೆಯ ಕೈಹಿಡಿಯಿತು. 2018ರಲ್ಲಿ ಈಕೆಯ ಓಟದ ವೇಗ ನೋಡಿದ ಅಡಿಡಾಸ್ ಶೂ ಕಂಪೆನಿ ಈಕೆಯನ್ನು ಸ್ಪೋರ್ಟ್ಸ್ ಅಂಬಾಸಿಡರ್ ಆಗಿ ಆಯ್ಕೆ ಮಾಡಿತು. ಈಕೆಯ ಹೆಸರಲ್ಲೇ ಕಸ್ಟಮ್ ಮೇಡ್ ಶೂ ತಯಾರಿಸಿತು. ಅದರ ಒಂದು ಬದಿಯಲ್ಲಿ ಹಿಮಾದಾಸ್ ಹೆಸರಿದ್ದರೆ, ಇನ್ನೊಂದು ಬದಿಯಲ್ಲಿ ಕ್ರಿಯೇಟ್ ಹಿಸ್ಟರಿ ಎಂದು ಬರೆಯಲಾಗಿದೆ. ಅಡಿಡಾಸ್ ಕಂಪೆನಿ ವರ್ಷಕ್ಕೆ 10ರಿಂದ 15 ಲಕ್ಷ ರೂಪಾಯಿ ಎಂಡೋರ್ಸ್‌ಮೆಂಟ್ ಫೀ ಕೂಡಾ ನೀಡುತ್ತಿದೆ. ಈಗಾಗಲೆ ಭಾರತದಲ್ಲಿ ಅಡಿಡಾಸ್ ಕಂಪೆನಿಯ ಬ್ರ್ಯಾಂಡ್ ಅಂಬಾಸಿಡರ್ ಆಗಿರುವ ರೋಹಿತ್ ಶರ್ಮಾ, ಕುಲದೀಪ್ ಯಾದವ್, ರಿಷಬ್ ಪಂತ್, ದೀಪಿಕಾ ಪಳ್ಳಿಕಲ್, ಬಾಕ್ಸರ್ ನಿಖಾಥ್ ಝರೀನ್ ಸಾಲಿಗೆ ಹಿಮಾ ದಾಸ್ ಕೂಡಾ ಸೇರಿಕೊಂಡಿದ್ದಾರೆ.

ಬಾಲ್ಯದಲ್ಲಿ ಶಾಲೆಯಲ್ಲಿ ಗಂಡುಮಕ್ಕಳ ಜೊತೆಗೆ ಫುಟ್‌ಬಾಲ್ ಆಡುತ್ತಿದ್ದ ಈಕೆಯ ಕನಸು ಇದ್ದದ್ದು ಫುಟ್‌ಬಾಲ್ ಆಟಗಾರ್ತಿ ಆಗಬೇಕೆಂದು. ಆದರೆ ಶಾಲೆಯಲ್ಲಿ ದೈಹಿಕ ಶಿಕ್ಷಕ ಶಂಸುಲ್ ಹಕ್ ಅವರು, 'ಭಾರತದಲ್ಲಿ ಮಹಿಳಾ ಫುಟ್‌ಬಾಲ್‌ಗೆ ಭವಿಷ್ಯ ಇಲ್ಲ. ಓಟದ ಸ್ಪರ್ಧೆ ಅಭ್ಯಾಸ ಮಾಡು' ಎಂದು ಸಲಹೆ ನೀಡಿದ್ದು ಇಲ್ಲಿಯವರೆಗೆ ಕರೆತಂದಿದೆ.

ಈಕೆಯ ಸಾಧನೆಯನ್ನು ಗುರುತಿಸಿ ಅಸ್ಸಾಂ ಸರ್ಕಾರ ಈಗಾಗಲೆ ಡಿಎಸ್‌ಪಿ ಹುದ್ದೆ ನೀಡಿದೆ. ಸಚಿನ್ ತೆಂಡೂಲ್ಕರ್ ಈಕೆಯ ರೋಲ್ ಮಾಡೆಲ್ ಅಂತೆ. ಈಗೇನಿದ್ದರೂ ಟೋಕಿಯೊ ಮೇಲೆ ಕಣ್ಣು.

■ ಹನಿ




Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65